**File No.DTE-CDC0CDC/3/2021-JD CDC-DEPT TECH EDUCATION**

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ
ಬೆಂಗಳೂರು-560001, ದಿ:28-01-2021

-: ಸುತ್ತೋಲೆ :-

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಗಳಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳ ಕುರಿತು.

*****

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಗಳಲ್ಲಿ ಈಗಾಗಲೇ 2020-21ನೇ ಸಾಲಿನ ಶೈಕ್ಷಣಿಕ ತರಗತಿಗಳು ಪ್ರಾರಂಭವಾಗಿದ್ದು, ಕೋವಿಡ್-19ರ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ವ್ಯಾಸಂಗದ ಹಿತದೃಷ್ಠಿಯಿಂದ, ಸಂಸ್ಥೆಯ ಸಿಸಿಟೆಕ್ ಉಪಘಟಕದ ವತಿಯಿಂದ ಪ್ರಸ್ತುತ ಸೆಮಿಸ್ಟರ್ ನ ಅಂತ್ಯದವರೆಗೆ ಉಪನ್ಯಾಸಕರುಗಳಿಗೆ ಆಯೋಜಿಸುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳ ಸಂಬಂಧ, ಸಂಸ್ಥೆಗಳಿಂದ ಸ್ವೀಕೃತವಾಗಿರುವ/ಸ್ವೀಕೃತವಾಗುವ ಯವುದೇ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಮುಂದುವರೆದು, ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುವ ಅಲ್ಪಾವಧಿ ತರಬೇತಿಗಳು, ವೃತ್ತಿ ಶಿಕ್ಷಣ ತರಬೇತಿಗಳು ಮತ್ತು ಇತರೆ ಅಗತ್ಯ ಕಾರ್ಯ ಚಟುವಟಿಕೆಗಳನ್ನು ನಡೆಸುವ ಸಂಬಂಧ ಇಲಾಖೆಗೆ ಸಲ್ಲಿಸುವ ಪ್ರಸ್ತಾವನೆ ಜೊತೆ ಲಗತ್ತಿಸುವ ಮಾಹಿತಿಯ ದಾಖಲೆಗಳನ್ನು ಸಹ ಕನ್ನಡದಲ್ಲೇ ಸಲ್ಲಿಸುವಂತೆ ಸೂಚಿಸಲಾಗಿದೆ ಹಾಗೂ ಇ-ಕಛೇರಿ ಮುಖಾಂತರ ಕಾರ್ಯ ನಿರ್ವಹಿಸುತ್ತಿರುವುದರಿಂದ ತಮ್ಮ ಸಂಸ್ಥೆಗಳಿಂದ ಸಲ್ಲಿಸುವ ಪ್ರಸ್ತಾವನೆಗಳನ್ನು ಕನಿಷ್ಠ 20 ದಿನಗಳ ಮುಂಚಿತವಾಗಿ ಆಯುಕ್ತರ ಕಛೇರಿಗೆ ತಲುಪುವಂತೆ ಸೂಕ್ತ ಕ್ರಮವಹಿಸಿ, ಇಲಾಖೆ ಅನುಮೋದನೆ ಪಡೆಯುವಂತೆ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:- ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:- ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.